



ಸಿರಿಧಾನ್ಯ ಆಧಾರಿತ ಮಿಶ್ರ ಬೆಳೆ ಬೇಸಾಯವನ್ನು ಮರಳಿ ಚಾಲ್ತಿಗೆ ತಂದಿರುವುದು ಸಂಘದ ಹೆಗ್ಗಳಿಕೆಯಾಗಿದೆ.

ಸಂಘದಲ್ಲಿ 14 ಮಹಿಳೆಯರಿದ್ದಾರೆ. ಅವರಲ್ಲಿ ಅರ್ಧಕ್ಕರ್ಧ ಭೂರಹಿತರು. ಉಳಿದವರಿಗೆ ಅಲ್ಪ ಸ್ವಲ್ಪ ಜಮೀನಿದೆ. ಆ ಪುಟ್ಟ ಜಮೀನುಗಳಲ್ಲಿಯೇ ವೈವಿಧ್ಯಮಯ ಬೆಳೆಗಳನ್ನು ಹಾಕುತ್ತಾರೆ. ಭೂಮಿ ಇಲ್ಲದವರು ಕೃಷಿ ಕೆಲಸಗಳಲ್ಲಿ ಕೈಜೋಡಿಸುತ್ತಾರೆ. ಅವರಿಗೂ ಜೀವನ ನಿರ್ವಹಣೆಗೆ ದಾರಿ.

'ನಮ್ಮ ಅಜ್ಜಿಯರ ಕಾಲದಿಂದಲೂ ಸಿರಿಧಾನ್ಯಗಳು, ಅಕ್ಕಡಿ ಬೆಳೆಗಳನ್ನು ಬೆಳೆಯುತ್ತಿದ್ದೆವು. ನಡುವೆ ಕೈಬಿಟ್ಟು ಒಂದೋ ಎರಡೋ ಬೆಳೆ ಹಾಕ್ತಾ ಇದ್ದರ್ರಿ. ನಮಗೂ ಹಳೇಕಾಲದಂತೆ ಬೆಳೀಬೇಕಂತ ಆಸೆ. ಆದ್ರೆ ಹೆಂಗ ಅಂತ ತಿಳೀವಲ್ದಾಗಿತ್ತು. ಆಗ ನಮ್ಮನ್ನ ಗುರ್ತಿಸಿದ್ದು ಸಹಜ ಸಮೃದ್ಧ' ಎಂದು 8 ವರ್ಷಗಳ ಹಿಂದೆ ಶುರುವಾದ ತಮ್ಮ ಸಂಘದ ಬಗ್ಗೆ ಹೇಳುತ್ತಾರೆ ಸದಸ್ಯರು.

ಸಂಘ ಶುರುವಾದ ನಂತರ ಮೊದಲು ಆರಂಭಿಸಿದ್ದು ದೇಸಿ ಬೀಜ ಸಂರಕ್ಷಣೆಯ ಕೆಲಸ. ಒಂದು ಕಾಲಕ್ಕೆ ಯಥೇಚ್ಛವಾಗಿ ಬೆಳೆಯುತ್ತಿದ್ದು ಕಣ್ಮರೆಯಾಗಿದ್ದ ರಾಗಿ ವೈವಿಧ್ಯವನ್ನು ಮರಳಿ ತಂದಿದ್ದು ಇವರ ಸಂಘದ ಮೊದಲ ಸಾಹಸ.

ಬೀಜ ಸಾರ್ವಭೌಮತ್ವವು ರೈತರ ಕೈಯಲ್ಲಿರಬೇಕು ಎಂಬ ತತ್ವದನ್ವಯ ಬೀಬಿ ಫಾತಿಮಾ ಸಂಘವು 2019ರಲ್ಲಿ ಸಮುದಾಯ ಬೀಜ ಬ್ಯಾಂಕ್ ಶುರುಮಾಡಿತು. ತಾವು ಬೆಳೆದ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಸಂಗ್ರಹಿಸಿದ ಬೆರಳೆಣಿಕೆಯಷ್ಟು ತಳಿಗಳಿಂದ ಆರಂಭವಾದ ಬೀಜ ಬ್ಯಾಂಕಿನಲ್ಲಿ ಇಂದು ವಿವಿಧ ಬೆಳೆಗಳ 300ಕ್ಕೂ ಅಧಿಕ ತಳಿಗಳಿವೆ. ಅದರಲ್ಲಿ 75 ವಿಧದ ರಾಗಿ, 25 ವಿಧದ ಸಿರಿಧಾನ್ಯಗಳು, ಹತ್ತಾರು ಬೇಳೆ ಕಾಳುಗಳು, ತರಕಾರಿಗಳು ಸೇರಿವೆ. ಆಯಾ ಬೆಳೆಗಳ ತೆನೆಗಳನ್ನೂ ಇಲ್ಲಿ ಪ್ರದರ್ಶಿಸಿರುವುದು ಅಧ್ಯಯನ ದೃಷ್ಟಿಯಿಂದ ಉಪಯುಕ್ತ. ಮಣ್ಣಿನ ಮಡಿಕೆ, ತೂಗು ಬಿಟ್ಟ ತೆನೆಗಳು, ನೇತು ಹಾಕಿದ ಸೋರೆ, ಹೀರೆ ಇತ್ಯಾದಿ ತರಕಾರಿಗಳು, ಆಕರ್ಷಕ ವರ್ಲಿ ಚಿತ್ತಾರದಿಂದ ತುಂಬಿರುವ ಇವರ ಬೀಜ ಬ್ಯಾಂಕ್ ನೋಡಲು ಕಣ್ಣಿಗೆ ಹಬ್ಬ.

ಒಮ್ಮೆ ಗದಗಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಿಂದ ಆಗಮಿಸಿದ್ದ ಪ್ರಾಧ್ಯಾಪಕರ ತಂಡವು ಇವರ ಬೀಜ ಬ್ಯಾಂಕಿನ ವೈವಿಧ್ಯತೆ ಮತ್ತು ಅಚ್ಚುಕಟ್ಟುತನವನ್ನು ನೋಡಿ ಬೆರಗಾಗಿತ್ತು. ಅಲ್ಲದೆ ವಿವಿಯಲ್ಲಿ ಸ್ಥಾಪಿಸಿದ್ದ ಬೀಜಬ್ಯಾಂಕಿಗೆ ಹತ್ತಾರು ತಳಿಗಳನ್ನು ಇಲ್ಲಿಂದ ತೆಗೆದುಕೊಂಡು ಹೋಗಿದ್ದರು. ಈ ಮಹಿಳಾ ಬಳಗದ ಕೃಷಿ ಶ್ರದ್ಧೆಯನ್ನು 2018ರಲ್ಲಿ ಮೊದಲು ಗುರುತಿಸಿ ಸಂಘಟಿಸಿದ ಶಾಂತಕುಮಾರ್ ಹೇಳುವಂತೆ ಪ್ರತಿವರ್ಷ ಸಂಘವು ಸುಮಾರು 5 ಟನ್ ಬಿತ್ತನೆ ಬೀಜಗಳನ್ನು ವಿತರಿಸುತ್ತಿದೆ. ಹವಾಮಾನ ವೈಪರೀತ್ಯ ಬಿಕ್ಕಟ್ಟನ್ನು ಎದುರಿಸುವ ಸಾಮರ್ಥ್ಯವುಳ್ಳ ದೇಸಿ ತಳಿಗಳ ಸಂರಕ್ಷಣೆಯನ್ನು ಆದ್ಯತೆ ಮೇರೆಗೆ ಕೈಗೊಂಡಿರುವ ಸಂಘವು ದೇಸಿ ಬೀಜಗಳನ್ನು ಆಸಕ್ತ ರೈತರಿಗೆ ವಿತರಿಸುತ್ತಿದೆ. ಬೀಜ ಪಡೆದ ರೈತರು ಬೆಳೆದ ನಂತರ ಎರಡು ಪಟ್ಟು ಬೀಜಗಳನ್ನು ಸಂಘಕ್ಕೆ ಕೊಡಬೇಕು. ಅದು ಇವರ ಕಟ್ಟಪ್ಪಣೆ. ಮುಂಗಾರು ಮತ್ತು ಹಿಂಗಾರಿಗೆ ಬೇಕಾದ ಬಿತ್ತನೆಗಳು ಇವರಲ್ಲಿ ಲಭ್ಯ. ಸುತ್ತಮುತ್ತಲಿನ ಹಳ್ಳಿ ಹಾಗೂ ತಾಲ್ಲೂಕಿನಿಂದ ರೈತರು ಬಂದು ಬೀಜ ಪಡೆಯುವುದು ರೂಢಿ. ಅಲ್ಲದೆ ಪ್ರತಿ ವರ್ಷ 'ಬೀಜ ಮೇಳ' ಏರ್ಪಡಿಸಿ ಕ್ವಿಂಟಲ್ ಗಟ್ಟಲೆ ದೇಸಿ ಬೀಜಗಳನ್ನು ಸಂಘವು ನೀಡುತ್ತಿದೆ. ರೈತರು ಮರೆತುಹೋಗಿರುವ ಅಕ್ಕಡಿ ಪದ್ಧತಿಯನ್ನು ಬೆಳೆಯಲು ಸಹಾಯವಾಗುವಂತೆ 9 ಬೆಳೆಗಳ ಬೀಜಗಳನ್ನು ಒಳಗೊಂಡ 'ನವಧಾನ್ಯ ಕಿಟ್' ಅನ್ನು ಸಂಘ ಅಭಿವೃದ್ಧಿಪಡಿಸಿರುವುದು ವಿಶೇಷ. ಒಂದು ಕಿಟ್ ಒಂದು ಎಕರೆಗೆ ಬಿತ್ತಬಹುದು. ದ್ವಿದಳ ಧಾನ್ಯಗಳು, ಎಣ್ಣೆ ಬೀಜಗಳು, ರಾಗಿ ಮತ್ತು ತರಕಾರಿ ಬೀಜಗಳನ್ನು ಕಿಟ್



